**<u>ದಿ:29.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:</u>**ಪ್ರತಿವಾದಿಯರ ಪರ ವಕೀಲರಿಂದ:-

ಈ ದಾವೆಯನ್ನು ಹೂಡಲು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರಸ್ತುತ ದಾವೆಯನ್ನು ಯಾವ ಕಾರಣಕ್ಕಾಗಿ ಮತ್ತು ಯಾವ ಆಸ್ತಿಗೆ ಸಂಬಂದಪಟ್ಟಂತೆ ಹೂಡಿರುತ್ತೇನೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ಗ್ರಾಮದಲ್ಲಿ ಯಾವ ಆಸ್ತಿ ಗ್ರಾಮ ಠಾಣಾ ಆಸ್ತಿ ಇರುತ್ತವೆ ಮತ್ತು ಯಾವ ಆಸ್ತಿ ಮಾಲ್ಕಿ ಆಸ್ತಿ ಇರುತ್ತವೆ ಎನ್ನುವ ಬಗ್ಗೆ ಮಾಹಿತಿ ಇರುತ್ತದೆ. ನನ್ನ ತಂದೆ ತಾಯಿಗೆ ಸೇರಿದ ಎಲ್ಲಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸಾಕ್ಷಿ ಮುಂದುವರಿದು ದಾವಾ ಆಸ್ತಿಯ ನನ್ನ ತಂದೆ ತಾಯಿಗೆ ಸೇರಿದ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಎದುರುಗಡೆ ನಮ್ಮ ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿ ನಾವು ನಮ್ಮ ತಾಯಿ ಹೆಸರಿನಲ್ಲಿ ಖರೀದಿ ಮಾಡಿದ ಆಸ್ತಿ ಇರುತ್ತದೆ. ಸದರಿ ಆಸ್ತಿಯ ಉತಾರ್ ನಿ.ಪಿ.5 ರಿಂದ 7 ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ.5 ರಿಂದ 7 ರಲ್ಲಿ ಸದರಿ ಆಸ್ತಿ ನನ್ನ ತಂದೆಗೆ ಸೇರಿದ ಆಸ್ತಿ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪಾಲು ವಿಭಾಗ ಮಾಡುವ ಕಾಲಕ್ಕೆ ಅವರ ಕುಟುಂಬಕ್ಕೆ ಸಂಬಂದಪಟ್ಟ ಆಸ್ತಿಗಳ ಬಗ್ಗೆ ಪಾಲು ವಿಭಾಗ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಾನು, ನನ್ನ ತಂದೆ ಮತ್ತು ತಾಯಿ ಇವತ್ತಿಗೂ ಸಹ ಒಟ್ಟು ಕುಟುಂಬದ ಸದಸ್ಯರು ಆಗಿರುತ್ತೇವೆ ಎಂದರೆ ಸರಿ. ನಿ.ಪಿ.1 ಪಾಲು ವಿಭಾಗ ಪತ್ರದಲ್ಲಿ ನನ್ನ ತಾಯಿಗೆ ಸೇರಿದ ಯಾವದೇ ಆಸ್ತಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪಾಲು ವಿಬಾಗ ಪತ್ರ ನನ್ನ ತಂದೆಗೆ ಸೇರಿದ ಆಸ್ತಿಗಳ ಬಗ್ಗೆ ಇರುತ್ತದೆ ಎಂದು ಹೇಳುತ್ತಾರೆ. ನಿ.ಪಿ.1 ಪಾಲು ವಿಭಾಗ ಪತ್ರದಲ್ಲಿ ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಮುಂದೆ ಇರುವ ನನ್ನ ತಾಯಿಯ ಆಸ್ತಿಯ ಖಾತಾ ನಂಬರು ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ಪಂಚಾಯಿತಿಯಲ್ಲಿ ಖಾತಾ ನಂಬರು ಮತ್ತು ಕಾಣುಶ್ಮರಿ ನಂಬರು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ನಿ.ಪಿ. 1 ಪಾಲು ವಿಭಾಗ ಪತ್ರದ ಆದಾರದ ಮೇಲೆ ನಾನು ಪಂಚಾಯಿತಿ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ಆಸ್ತಿ ನಂ:463/2 ನೇದ್ದರ ದಾಖಲೆಗಳನ್ನು ಸುಳ್ಳು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ

ಸರಿಯಲ್ಲ. ಸದರಿ ದಾಖಲೆಗಳ ಆದಾರದ ಮೇಲೆ ನಿ.ಪಿ.2 ಕಂಪ್ಯೂಟರ್ ಉತಾರ್ ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆ ದಿ:20.02.1995 ರಂದು ಆಸ್ತಿ ನಂ:423 ಮಹದೇವಮ್ಮ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಹದೇವಮ್ಮ ಇವರ ಮಗಳು ದೇವಿರಮ್ಮ ಎನ್ನುವವರು ಇರುತ್ತಾರೆ ಎಂದರೆ ಸರಿ. ಸದರಿ ದೇವಿರಮ್ಮ ಇವರ ತಾಯಿ ಖರೀದಿ ಮಾಡಿದ ಆಸ್ತಿ ಬಸಪ್ಪ ಇವರ ಆಸ್ತಿಯ ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದೇವಿರಮ್ಮ ಇವರ ತಾಯಿ ಖರೀದಿ ಮಾಡಿದ ಆಸ್ತಿಯ ಪೂರ್ವಕ್ಕೆ ಬಸಪ್ಪ ಇವರ ಉಳಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಆ ನಂತರ ಪಂಚಾಯಿತಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಾವಾ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ:2 ಇವರ ತಂದೆಯ ಆಸ್ತಿ ನಮ್ಮ ಆಸ್ತಿ ಇರುತ್ತದೆ ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ:27.06.2018 ರಂದು ದಾವಾ ಆಸ್ತಿ ನನಗೆ ರಾಜೀವ್ ಗಾಂದಿ ಹೌಸಿಂಗ್ ಕಾರ್ಪೋರೇಷನ್ ಲಿಮಿಟೆಡ್ ಯೋಜನೆ ಅಡಿಯಲ್ಲಿ ಗ್ರಾಮ ಪಂಚಾಯಿತಿಯಿಂದ ಮಂಜೂರು ಆದ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಮೇಲೇ ಹೇಳಿದ ಯೋಜನೆಯ ಅಡಿಯಲ್ಲಿ ಮಂಜೂರು ಆಗಿರುತ್ತದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯನ್ನು ಹೂಡಲು ಯಾವುದೆ ದಾವಾ ಕಾರಣ ಹುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಸಿವಿಲ್ ನ್ಯಾಯಾಧೀಶರು, ಜಗಳೂರು**